**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 3680/2023 ಸಿ.ಡಬ್ಲ್ಯೂ–10 ಪಿ.ಡಬ್ಲ್ಯೂ–10

| | | |
|---|---|---|
| ಹೆಸರು | ಃ | ವಾತ್ಸಲ್ಯ |
| ತಂದೆಃಗಂಡ | ಃ | ಸಂಗಣ್ಣಾ |
| ವಯಸ್ಸು | ಃ | ೩೬ ವರ್ಷ |
| ಉದ್ಯೋಗ | : | ಪಿಎಸ್ಐ, ರೆವೂರ |
| ವಾಸಸ್ಥಳ | ಃ | ರೆವೂರ |

ದಿನಾಂಕಃ 10.10.2025
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ:ಸ:ಅ ಅವರಿಂದಃ**

ನಾನು ದಿಃ 21-09-2021 ರಿಂದ ದಿಃ 30-07-2023 ರವರೆಗೆ ನರೋಣಾ ಪೋಲಿಸ ಠಾಣೆಯಲ್ಲಿ ಪಿ,ಎಸ್.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ.

ದಿಃ 11-04-2022 ರಂದು ಚಾಸಾ 9 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು, ಅದೇ ದಿನ ಬೆ. 9.00 ರಿಂದ 10.00 ರವರೆಗೆ, ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಕೈಗೊಂಡು, ಸ್ಥಳದಿಂದ ಒಂದು ಕಲ್ಲನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ 1 ರವರ ಪುರವಣಿ ಹೇಳಿಕೆಯನ್ನು ಪಡೆದು ಚಾಸಾ 4 ರಿಂದ 7 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ದಿಃ 12-04-2022 ರಂದು ಚಾಸಾ 2 ಮತುತ 3 ರವರ ಸಮಕ್ಷಮ ಜಪ್ತಿ ಪಂಚನಾಮೆಯನ್ನು ಕೈಕೊಂಡು ಒಂದು ರಾಯಲ್ ಎನಫಿಲ್ಡ್ ಮೋಟಾರ ಸೈಕಲ್ ನಂಬರ ಕೆ ಎ 32/ಇ,ಎಸ್-0127 ನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ. ನಂತರ ಚಾಸಾ 8 ರವರ ಕಡೆಯಿಂದ ಚಾಸಾ 1 ಮತ್ತು 4 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡು, ನಂತರ ಕಡತವನ್ನು ಚಾಸಾ 11 ರವರಿಗೆ ನೀಡಿರುತ್ತೇನೆ.

ಸಾಕ್ಷಿಯು ನಿಪಿ-5 ರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 5ಸಿ ಅಂತ ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು,

ಅದನ್ನು ನಿಪಿ 6ಸಿ ಅಂತ ಗುರುತಿಸಲಾಯಿತು. ಸಾಕ್ಷಿಯು ನಿಪಿ-7 ಮತ್ತು 8 ರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ. 7 ಎ ಮತ್ತು 8 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು.ಮಾ.1ನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು ಆರೋಪಿತರ ಪರ ಶ್ರೀ. ಬಿ.ಜಿ.ಬಿ ವಕೀಲರಿಂದಃ**

ಪಂಚರನ್ನು ಚಾಸಾ 5 ರವರು ಕರೆಸಿರುತ್ತಾರೆ. ನಾವು ಗುನ್ನಾ ಸ್ಥಳದ ಪಂಚನಾಮೆಗಾಗಿ ಪಂಚರು ಬೇಕು ಅಂತಾ ಹೇಳಿದ ಕಾರಣ ಅವರು ಕರೆದುಕೊಂಡು ಬಂದಿರುತ್ತಾರೆ. ಕಲಂ 143, 147, 341, 323, 324, 307, 504, 506 ಸಹ ಕಲಂ 149 ರ ಅಡಿಯಲ್ಲಿ ಪಂಚನಾಮೆಯನ್ನು ಮಾಡಿರುತ್ತೇವೆ. ಚಾಸಾ 4 ರವರ ಹೇಳಿಕೆಯನ್ನು ನಾನು ದಿಃ 11-04-2022 ರಂದು 12.00 ಗಂಟೆ ನಂತರ ತೆಗೆದುಕೊಂಡಿದ್ದು. ಚಾಸಾ 5 ರವರ ಹೇಳಿಕೆಯನ್ನು ಅದೇ ದಿನ ಸಾಯಂಕಾಲ ತೆಗೆದುಕೊಂಡಿರುತ್ತೇನೆ. ಸದರಿ ಅವರ ಹೇಳಿಕೆಗಳನ್ನು ಲ್ಯಾಪ್‌ಟಾಪನಲ್ಲಿ ಟೈಪ್ ಮಾಡಿಸಿರುತ್ತೇವೆ. ಸದರಿ ಟೈಪ ಮಾಡಿದ ಹೇಳಿಕೆಗಳನ್ನು ಅಲ್ಲಿಯೇ ಪ್ರಿಂಟ್ ತೆಗೆದುಕೊಂಡಿದ್ದಿರಾ ಎಂದರೆ ಸಾಕ್ಷಿಯು ನನಗೆ ನೆನಪು ಇಲ್ಲ ಅಂತಾ ನುಡಿಯುತ್ತಾರೆ. ಲ್ಯಾಪ್‌ಟಾಪ್ ಮಾಡಲ ಸಂಖ್ಯೆ ನನಗೆ ನೆನಪು ಇಲ್ಲ. ಚಾಸಾ 2 ಮತ್ತು 3 ರವರು ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಅಂತಾ ಹೇಳಿರುತ್ತಾರೆ ಎಂದರೆ ನಾನು ಪಂಚನಾಮೆ ಮಾಡಿರುತೇನೆ ಅಂತಾ ನುಡಿಯುತ್ತಾರೆ. ಪಂಚನಾಮೆಯ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದಿರುವುದಿಲ್ಲ. ಸಾಮಾನ್ಯವಾಗಿ ಪಂಚನಾಮೆಯ ಕಾಲಕ್ಕೆ ಭಾವಚಿತ್ರದ ತೆಗೆಯುತ್ತೇವೆ ಎಂದರೆ ಸರಿ. ಮು.ಮಾಲು 1 ಚೂಪಾದ ಕಲ್ಲು ಅಲ್ಲ ಎಂದರೆ ಸರಿಯಲ್ಲ. ಮು. ಮಾ. 1 ರ ಮೇಲೆ ರಕ್ತದ ಖಲೆಗಳು ಇಲ್ಲ ಎಂದರೆ ಸಾಕ್ಷಿಯು ನಾನು ಪಂಚನಾಮೆಯಲ್ಲಿ ರಕ್ತ ಹತ್ತಿದ ಕಲ್ಲು ಅಂತಾ ನಮೂದಿಸಿಲ್ಲ ಅಂತಾ ನುಡಿಯುತ್ತಾರೆ. ಮು.ಮಾ.1 ರೀತಿಯ ಕಲ್ಲುಗಳು ಎಲ್ಲಾ ಕಡೆಗೆ ಸಿಗುತ್ತವೆ ಎಂದರೆ ಸರಿಯಲ್ಲ. ಮು.ಮಾ.1 ಕ್ಕೆ ಮತ್ತು ಆರೋಪಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ. 7 ಮತ್ತು 8 ನ್ನು ಪಡೆಯುವಾಗ ಎಮ ಎಲ ಸಿ ದಾಖಲಾಗಿತ್ತಾ ಎಂದರೆ ಸಾಕ್ಷಿಯು ದಾಖಲಾಗಿತ್ತು ಅಂತಾ ನುಡಿಯುತ್ತಾರೆ. ಸಾಮಾನ್ಯವಾಗಿ

ಪಂಚನಾಮೆ ಮಾಡುವ ಕಾಲಕ್ಕೆ ಭಾವಚಿತ್ರವನ್ನು ತೆಗೆಯುತ್ತಿದ್ದು ನಾನು ಈ ಪ್ರಕರಣದಲ್ಲಿ ಸ್ಥಳಕ್ಕೆ ಹೋಗದೇ ಠಾಣೆಯಲ್ಲಿ ಕುಳಿತು ಪಂಚನಾಮೆ ತಯಾರು ಮಾಡಿದ ಕಾರಣ ಭಾವಚಿತ್ರವನ್ನು ತೆಗೆದು ಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮು.ಮಾಲನ್ನು ಜಪ್ತಿ ಪಡಿಸಿಕೊಂಡಿಲ್ಲ ಮತ್ತು ಯಾವುದೇ ಹೇಳಿಕೆ ಹಾಗೂ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪ್ರ.ವ.ವ.ವರದಿ ದಾಖಲಾದ ಕಾರಣ ಸುಳ್ಳು ತನಿಖೆ ಮಾಡಿ ಸುಳ್ಳು ದಾಖಲೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿ ಅಲ್ಲ.

**ಮರುವಿಚಾರಣೆ : ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಸಿ.ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.